**ದಿನಾಂಕ: 03.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಿಂದ:**

Aster CMI ಆಸ್ಪತ್ರೆಯಲ್ಲಿ ಅರ್ಜಿದಾರರಿಗೆ ಸಂಪೂರ್ಣ ಚಿಕಿತ್ಸೆಯಾಗಿದೆ. ನಾನು ಸಹ ಅರ್ಜಿದಾರರಿಗೆ ಚಿಕಿತ್ಸೆ ನೀಡಿದ್ದೇನೆ. ಡಾ. ನವೀನ್ ಎಂಬುವವರು ಆರ್ಥೋಪೆಡಿಕ್ ನ ಮುಖ್ಯಸ್ತರಾಗಿರುತ್ತಾರೆ. ಗಾಯಾಳುವಿಗೆ ಒಳಜೋಡಣೆ ಮಾಡಲಾಗಿದೆ. ಇತ್ತೀಚಿನ ಎಕ್ಸರೇ ವರದಿಯ ಪ್ರಕಾರ ಮೂಳೆ ಮುರಿತ ಕೂಡಿಕೊಂಡಿದ್ದು ಒಳಜೋಡಣೆ ತೆಗೆಯುವುದು ಅವಶ್ಯಕವಾಗಿರುತ್ತದೆ. 2022 ರಲ್ಲಿ ಅಪಘಾತವಾಗಿದ್ದು 4 ವರ್ಷಗಳವರೆಗೂ ಒಳಜೋಡಣೆಯನ್ನು ತೆಗೆಯದಿರುವುದು ಗಾಯಾಳುವಿಗೆ ಯಾವುದೇ ರೀತಿ ತೊಂದರೆಯಾಗಿರುವುದಿಲ್ಲವೇ ಎಂದರೆ ಸಾಕ್ಷಿಯು ಅದರಿಂದ ಏನಾದರೂ ತೊಂದರೆ ಉಂಟಾದಲ್ಲಿ ಮಾತ್ರ ನಾವು ಒಳಜೋಡಣೆಯನ್ನು ತೆಗೆಯಲು ಸಲಹೆ ನೀಡುತ್ತೇವೆ ಹಾಗೆಯೇ ಅದರಿಂದ ಏನಾದರೂ ತೊಂದರೆ ಉಂಟಾದಲ್ಲಿ ಗಾಯಾಳು ಕಾಲ ಕಾಲಕ್ಕೆ ಚಿಕಿತ್ಸೆ ಪಡೆದುಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ಮೂಳೆ ಮುರಿತ ಜಾಗದಲ್ಲಿ ಯಾವುದೇ ರೀತಿ Infection ಇರುವುದಿಲ್ಲ. ಗಾಯಾಳುವಿಗೆ ಮೂಳೆ ಮುರಿತದ ಜಾಗದಲ್ಲಿ ಯಾವುದೇ ರೀತಿ ಮೂಳೆ ಕುಂಠಿತವಾಗಿರುವುದಿಲ್ಲ, ಆದರೆ ಸ್ವಲ್ಪ ಪ್ರಮಾಣದಲ್ಲಿ ಮಾಂಡ ಖಂಡಗಳಲ್ಲಿ ಶಕ್ತಿ ಕುಂಠಿತವಾಗಿರುತ್ತದೆ. ಗಾಯಾಳುವಿಗೆ ಮೂಳೆ ಮುರಿತದ ಜಾಗವು ದೇಹದ ಸಂಪೂರ್ಣ ತೂಕವನ್ನು ಭರಿಸುವಂತಹ ಜಾಗವಾಗಿರುವುದಿಲ್ಲ ಎಂದರೆ ಸಾಕ್ಷಿಯು ಮೂಳೆ ಮುರಿತದ ಜಾಗವು ವ್ಯಕ್ತಿಯ ಚಲನವಲನಕ್ಕೆ ತುಂಬಾ ಅವಶ್ಯಕವಾಗಿರುತ್ತದೆ ಎಂದು ನುಡಿಯುತ್ತಾರೆ.

**2.** ನಾನು ಕೇಂದ್ರ ಸರ್ಕಾರದ ಅಧಿಸೂಚನೆ ಮತ್ತು ಮಾರ್ಗಸೂಚನೆಗಳನ್ನು ಅನುಸರಿಸಿರುತ್ತೇನೆ. ಇತ್ತೀಚಿನ ಅಧಿಸೂಚನೆ ಮತ್ತು ಮಾರ್ಗಸೂಚಿಗಳನ್ನು ನಾನು

ಅನುಸರಿಸಿರುವುದಿಲ್ಲ ಹಳೆಯ ಮಾರ್ಗಸೂಚಿಗಳನ್ನು ಅನುಸರಿಸಿರುತ್ತೇನೆ. ನಾನು Telescopy formula ಅನುರಿಸಿರುತ್ತೇನೆ. ಮೊಣಕೈ ಚಲನ ವಲನಗಳು 13.32 ನಷ್ಟು ಅಂಗನ್ಯೂನ್ಯತೆ ಉಂಟಾಗಿದ್ದು, ಶಕ್ತಿ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ 1.5 ನ್ಯೂನ್ಯತೆ ಉಂಟಾಗಿರುತ್ತದೆ. ಭುಜದ ಜೋಡಣೆ ಸಹಜವಾಗಿದೆ. ಒಳಜೋಡಣೆ ಹಾಗೆ ಇರುವ ಕಾರಣ ಅಂಗನ್ಯೂನ್ಯತೆಯಲ್ಲಿ ವ್ಯತ್ಯಾಸದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದರೆ ಸರಿ. ನಾನು ಕೇವಲ ದೈಹಿಕ ನ್ಯೂನ್ಯತೆಯ ಮಾತ್ರ ಅಳೆದಿದ್ದು ವೃತ್ತಿಪರ ನ್ಯೂನ್ಯತೆಯ ಬಗ್ಗೆ ಅಳೆದಿರುವುದಿಲ್ಲ. ಮುಂದುವರೆದ ಚಿಕಿತ್ಸಾ ವೆಚ್ಚದ ಅಂದಾಜು ಪಟ್ಟಿಯನ್ನು ನಾನು ಸಲ್ಲಿಸಿರುವುದಿಲ್ಲ. ಆಸ್ಪತ್ರೆಯಿಂದ ಆಸ್ಪತ್ರೆಗೆ ವೈದ್ಯಕೀಯ ವೆಚ್ಚಗಳಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಹೆಚ್ಚಿನ ಪ್ರಮಾಣದಲ್ಲಿ ಮುಂದುವರೆದ ಚಿಕಿತ್ಸಾ ವೆಚ್ಚವನ್ನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪ್ರಮಾಣದಲ್ಲಿ ಅಂಗನ್ಯೂನ್ಯತೆಯ ನಿರ್ಧರಿಸಿದ್ದೇನೆ ಎಂದರೆ ಸರಿಯಲ್ಲ. ಮೂಳೆ ಮುರಿತ ಕೂಡಿಕೊಂಡು ಬೇರೆ ಯಾವುದೇ ತೊಂದರೆ ಇಲ್ಲದಿದ್ದರೂ ಸಹ ಹೆಚ್ಚಿನ ಪ್ರಮಾಣದಲ್ಲಿ ಅಂಗನ್ಯೂನ್ಯತೆಯ ನಿರ್ಧರಿಸಿದ್ದೀರಿ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.